**ಓ.ಎಸ್ ನಂಃ 81/2021**

***ಪಿ .ಡಬ್ಲು–3***

ಸಾಕ್ಷಿಯನ್ನು ದಿನಾಂಕಃ 02.04.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ– ಪ್ರತಿವಾದಿ ಪರ ಶ್ರೀ. ಪಿ ಎಂ ಎಸ್ ವಕೀಲರಿಂದ**

ವಾದಿ ಹಾಗೂ ಪ್ರತಿವಾದಿಯರು ಗೊತ್ತು. ನಾನು ಕರಿವಿರೆಡ್ಡಿ ಹಳ್ಳಿ ಗ್ರಾಮದವನು. 4 ನೇ ವಾದಿ ಗೊತ್ತು ಅವರು ಜೀವಾಂತ ಇರುವುದಿಲ್ಲ. 5 ವರುಷಗಳಿಂದ 4 ನೇ ಪ್ರತಿವಾದಿ ತೀರಿಕೊಂಡಿರುತ್ತಾರೆ. 4 ನೇ ವಾದಿಯ ಗಂಡನ ಹೆಸರು ಮುನಿಯಪ್ಪ. ಮುನಿಯಪ್ಪ ಸಹ ಈಗ ಜೀವಾಂತ ಇಲ್ಲ. 10–15 ವರುಷಗಳಿಂದ ಮುನಿಯಪ್ಪ ಮೃತ ಪಟ್ಟಿರುತ್ತಾರೆ. 4 ನೇ ಪ್ರತಿವಾದಿ ಹಾಗೂ ಆಕೆಯ ಗಂಡನಿಗೆ ಮಕ್ಕಳು ಇರುವುದಿಲ್ಲ. ಮುನಿಯಪ್ಪ ನವರ ತಂದೆ ಗೋಪಾಲಪ್ಪ. ಗೋಪಾಲಪ್ಪ ನವರನ್ನು ನಾನು ನೋಡಿರುತ್ತೇನೆ. 35 ವರುಷಗಳಿಂದ ಗೋಪಾಲಪ್ಪ ತೀರಿಕೊಂಡಿರುತ್ತಾರೆ. ಗೋಪಾಲಪ್ಪ ನವರಿಗೆ ಇಬ್ಬರು ಮಕ್ಕಳು ಮುನಿಯಪ್ಪ ಮತ್ತು ಚಿಕ್ಕವೆಂಕಟಪ್ಪ. ಚಿಕ್ಕವೆಂಕಟಪ್ಪ ನವರ ಮಕ್ಕಳು ಹೆಸರು ಸುಬ್ರಮಣಿ ಮತ್ತು ನಾರಾಯಣಪ್ಪ. ಸದರಿ ಸುಬ್ರಮಣಿ ಈ ದಾವೆಯಲ್ಲಿ 1 ನೇ ಪ್ರತಿವಾದಿ ಎಂದರೆ ಸರಿ. ನಾರಾಯಣಪ್ಪ ಈಗ ಜೀವಾಂತ ಇಲ್ಲ ಎಂದರೆ ಸರಿ . ಸುಮಾರು 15 ವರುಷಗಳಿಂದ ನಾರಾಯಣಪ್ಪ ತೀರಿಕೊಂಡಿರುತ್ತಾರೆ. ನಾರಾಯಣಪ್ಪನ ಮಕ್ಕಳು 7 ಮತ್ತು 8 ಪ್ರತಿವಾದಿಗಳು ಎಂದರೆ ಸರಿ. 6 ನೇ ಪ್ರತಿವಾದಿ ನಾರಾಯಣಪ್ಪ ನವರ ಹೆಂಡತಿ ಎಂದರೆ ಸರಿ. ಎರಡನೇ ಪ್ರತಿವಾದಿ ಒಂದನೇ ಪ್ರತಿವಾದಿ ಹೆಂಡತಿ ಮತ್ತು ಮೂರು ರಿಂದ 5 ಪ್ರತಿವಾದಿಗಳು 1 ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ.

1 ರಿಂದ 3 ವಾದಿಯರು ತೋಟಿ ಮುನಿವೆಂಕಟಪ್ಪನ ಮಕ್ಕಳು ಎಂದರೆ ಸರಿ. 5 ನೇ ವಾದಿ ದೊಡ್ಡ ವೆಂಕಟಪ್ಪ ನವರ ಮಗ ಎಂದರೆ ಸರಿ. 1 ರಿಂದ 3 ಮತ್ತು 5 ವಾದಿಯರು ಗೋಪಾಲಪ್ಪ ನ ಕುಟುಂಬಕ್ಕೆ ಸೇರಿದ್ದರು ಅಲ್ಲ ಎಂದರೆ ಸರಿಯಲ್ಲ. 1 ರಿಂದ 3 ಮತ್ತು 5 ವಾದಿಯರು 1 ನೇ ಪ್ರತಿವಾದಿ ಕುಟುಂಬಕ್ಕೆ ಸೇರಿದ ಬಗ್ಗೆ ಯಾವ ಯಾವ ದಾಖಲೆ ನೋಡಿರುತ್ತೀರಾ ಎಂದರೆ ಪಡಿತರ ಚೀಟಿ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೋಡಿರಬಹುದು. ಪಡಿತರ ಚೀಟಿಯನ್ನು ವಾದಿಯರು ಹಾಜರುಪಡಿಸಿರುತ್ತಾರಾ ಎಂದರೆ ಗೊತ್ತಿಲ್ಲ. ವಾದಿ ಹಾಗೂ ಪ್ರತಿವಾದಿಯರು ಒಂದೇ ಕುಟುಂಬ ಎಂಬ ಬಗ್ಗೆ ವಂಶ ವೃಕ್ಷ ನೋಡಿದ್ದೀರಾ ಎಂದರೆ ಗೋಪಾಲಪ್ಪ ಹಾಗೂ ಮುನಿವೆಂಕಟಪ್ಪ ನವರ ವಂಶವೃಕ್ಷ ಬೇರೆ ಇರುತ್ತದೆ. 1 ರಿಂದ 3 ಮತ್ತು 5 ವಾದಿಯರು ಹಾಗೂ ಒಂದನೇ ಪ್ರತಿವಾದಿ ಹಾಗೂ 4 ನೇ ವಾದಿ ಯ ಜಂಟಿ ಹೆಸರಿನಲ್ಲಿ ಖಾತೆ ಇರುವ ಬಗ್ಗೆ ನೋಡಿರುತ್ತೀರಾ ಎಂದರೆ 1 ನೇ ಪ್ರತಿವಾದಿ ಹಾಗೂ 4 ನೇ ವಾದಿ ಹೆಸರಿಗೆ ಇರುತ್ತದೆ.

4 ಆಸ್ತಿಗಳ ಸಂಬಂಧ ವಾದಿಯರು ದಾವೆ ಹಾಕಿರುತ್ತಾರೆ. ದಾವಾ ಆಸ್ತಿಗಳು 1 ನೇ ಪ್ರತಿವಾದಿ ಹಾಗೂ 4 ನೇ ವಾದಿ ಹೆಸರಿಗೆ ಜಂಟಿ ಖಾತೆ ಇರುತ್ತದೆ ಎಂದರೆ ಸರಿ. 1 ರಿಂದ 3 ಮತ್ತು 5 ವಾದಿಯರು ಹೆಸರಿನಲ್ಲಿ ಖಾತೆ ಇಲ್ಲ ಎಂದರೆ ಸರಿ. ವಾದಿ ಹಾಗೂ ಪ್ರತಿವಾದಿಯ ಒಟ್ಟಾಗಿ ವಾಸ ಅಗಿದ್ದೀರಾ ಎನ್ನಲಾದ ಮನೆ ಸಂಖ್ಯೆಯ ಏನು ಎಂದರೆ ನನಗೆ ಗೊತ್ತಿಲ್ಲ.ವಾದಿ ಹಾಗೂ ಪ್ರತಿವಾದಿಯರು ಒಂದೇ ಕುಟುಂಬದಲ್ಲಿ ಇರುವ ಬಗ್ಗೆ ಮತದಾರ ಪಟ್ಟಿ ನೋಡಿರುತ್ತೀರಾ ಎಂದರೆ

ವಿಭಾಗ ಆಗಿರುತ್ತಾರೆ. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರವನ್ನು ನಾನೇ ಹೇಳಿ ಬರೆಸಿರುತ್ತೇನೆ. ದಾವಾ ಸ್ವತ್ತು ಗೋಪಾಲಪ್ಪನಿಗೆ ಹೇಗೆ ಬಂದಿರುತ್ತದೆ ಎಂದರೆ ತೋಟಿ ಇನಾಮಿತಿ ಜಮೀನುಗಳು. ಯಾರ ಹೆಸರಿಗೆ ಮರು ಮಂಜೂರು ಆಗಿರುತ್ತದೆ ಎಂದರೆ ಗೋಪಾಲಪ್ಪ ಹೆಸರಿಗೆ ಸುಮಾರು 1980-81ರಲ್ಲಿ ಆಗಿರುತ್ತದೆ. ಮರು ಮಂಜೂರು ಆದೇಶವನ್ನು ನಾನು ಓದಿರುತ್ತೇನೆ. ಮರು ಮಂಜೂರುರಾತಿ ಕುರುಬರಹಳ್ಳಿ, ತಿಮ್ಮರಾವತನಹಳ್ಳಿ, ಕುಪಂಡಹಳ್ಳಿ ಮತ್ತು ಕರಿವಿರೆಡ್ಡಿ ಹಳ್ಳಿ ಗ್ರಾಮದ ವರಿಗೆ ಮರು ಮಂಜೂರಾತಿ ಆಗಿರುತ್ತದೆ. 1 ರಿಂದ 3 ಹಾಗೂ 5 ನೇ ವಾದಿಯ ತಂದೆ ಹೆಸರಿಗೆ ಮರು ಮಂಜೂರುರಾತಿ ಆಗಿಲ್ಲ ಎಂದರೆ ಸರಿಯಲ್ಲ . 1 ರಿಂದ 3 ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತೆನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಮಾಡಲು ಸುಳ್ಳು ನುಡಿಯುತ್ತಿನೆಂದರೆ ಸರಿಯಲ್ಲ. ವಾದಿಯರಿಗೆ ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲದಿದ್ದರೂ ಅವರ ಮಾತು ಕೇಳಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ 13 ರನ್ನು 1 ನೇ ವಾದಿ ಹಾಜರುಪಡಿಸಿದ್ದಾರೆ. ನಿಪಿ 13 ರಲ್ಲಿ ಪ್ರತಿವಾದಿಗಳ ಹೆಸರು ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ- ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)***

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

**(ಹರೀಶ್. ಜಿ )**

**ಪ್ರಧಾನ ಸಿವಿಲ್ ನ್ಯಾಯಾಧೀಶರು,**

**ಮತ್ತು ಜೆಎಂಎಫ್ ಸಿ, ಮುಳಬಾಗಿಲು**